**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,**
**ದ.ಕ., ಮಂಗಳೂರು.**

| | |
|---|---|
| **ಎಸ್.ಸಿ.ನಂ.55/2016 ಮತ್ತು 161/2021, 80/2023** | |
| ಫ್ರಾ.ಸಾ.10 | ಚಾ.ಸಾ.10 |

| | |
|---|---|
| ಸಾಕ್ಷಿದಾರರ ಹೆಸರು | ಸರಪಾಡಿ ಅಶೋಕ್ ಶೆಟ್ಟಿ |
| ತಂದೆಯ ಹೆಸರು | ನಾರಾಯಣ ಶೆಟ್ಟಿ |
| ಪ್ರಾಯ | 62 ವರ್ಷ |
| ಉದ್ಯೋಗ | ಯಕ್ಷಗಾನ ಕಲಾವಿದ ಮತ್ತು ಕೃಷಿ |
| ವಾಸಸ್ಥಳ | ಅಜಿಲಮೊಗರು ಮನೆ ಮತ್ತು ಅಂಚೆ, ಮಾಣಿ ನಾಲ್ಕೂರು ಗ್ರಾಮ, ಬಂಟ್ವಾಳ ತಾಲೂಕು. |
| ದಿನಾಂಕ | **21.02.2024** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

**ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ.**

ಗಣೇಶ ಶಿವರಾಮ ಶೆಟ್ಟಿ ನನ್ನ ಹೆಂಡತಿಯ ಅಣ್ಣನ ಮಗ. ಚಾಸಾ-13/ಲೋಹಿತ್ ಶೆಟ್ಟಿ ರವರು ನನ್ನ ಅಕ್ಕನ ಮಗ. ದಿನಾಂಕ 02.11.2015 ರಲ್ಲಿ ಮುಂಬೈನಿಂದ ನಮ್ಮ ಸಂಬಂಧಿಕರು ದೂರವಾಣಿ ಕರೆ ಮಾಡಿ ಗಣೇಶ ಶಿವರಾಮ ಶೆಟ್ಟಿರವರ ಕೊಲೆ ಮಂಗಳೂರು ಕಾರಾಗೃಹದಲ್ಲಿ ಆಗಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ಎ.ಜೆ ಆಸ್ಪತ್ರೆಯ ಶವಾಗಾರದಲ್ಲಿ ಮೃತರ ಶವವನ್ನು ಇಟ್ಟಿರುವ ವಿಷಯ ತಿಳಿದು ನಾನು ಚಾಸಾ-13/ಲೋಹಿತ್ ಶೆಟ್ಟಿರವರ ಒಟ್ಟಿಗೆ ಅಲ್ಲಿಗೆ ಹೋಗಿರುತ್ತೇನೆ. ನಾನು ಶವಾಗಾರದಲ್ಲಿ ಮೃತರ ಶವವನ್ನು ನೋಡಿದಾಗ ಅವರ ಹಣೆ, ಮುಖ, ಗಲ್ಲ, ತಲೆ, ಎದೆ, ತಲೆಯ ಹಿಂಬಾಗಕ್ಕೆ, ಕೈಗಳು ಮತ್ತು ಮೂಗಿನ ಮೇಲೆ ಹರಿತವಾದ ಆಯುಧದಿಂದ ಆದ ಗಾಯಗಳಂತೆ ಕಂಡುಬಂದಿತು.

2. ಶವಾಗಾರದಲ್ಲಿ ಪೊಲೀಸರು ಮತ್ತು ನ್ಯಾಯಾಧೀಶರು ಇದ್ದರು. ಪೊಲೀಸರು ಶವಾಗಾರದಲ್ಲಿ ಶವ ಪಂಚನಾಮೆಯನ್ನು ಮಾಡಿರುತ್ತಾರೆ ಮತ್ತು ನನ್ನ ಹೇಳಿಕೆ ಪಡೆದಿರುತ್ತಾರೆ. ನನ್ನ ಹೇಳಿಕೆಯನ್ನು ಮಾಡಿ ಸಹಿಯನ್ನು ಸಹ ಪಡೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ

ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು. ಶವದ ಮೈಮೇಲೆ ಒಂದು ಪಿಂಕ್ ಬಣ್ಣದ ಒಂದು ಬರ್ಮುಡ ಚಡ್ಡಿ ಇದ್ದು, ಅದರ ಮೇಲೆ ರಕ್ತದ ಕಲೆಗಳು ಇದ್ದವು. ನಾನು ಸದರಿ ಚಡ್ಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಚಡ್ಡಿಯನ್ನು ಮು.ಮಾ-26 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಮೃತರ 6 ಫೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿ-8 ಎಂದು ಗುರುತಿಸಲಾಗಿರುತ್ತದೆ.

3. ಮೃತ ಗಣೇಶ ಶೆಟ್ಟಿಯವರು ಅವಿವಾಹಿತರಾಗಿದ್ದರು. 2015 ರಲ್ಲಿ ಅವರ ತಾಯಿ ಬದುಕಿದ್ದರು. 2015 ಕ್ಕೂ ಪೂರ್ವದಲ್ಲಿ ಅವರ ತಂದೆ ಮರಣ ಹೊಂದಿದ್ದರು. 2015 ರಲ್ಲಿ ಮೃತ ಗಣೇಶ ಶಿವರಾಮ ಶೆಟ್ಟಿಯವರ ತಾಯಿ ಅನಾರೋಗ್ಯ ಪೀಡಿತರಾಗಿ ಮನೆಯಲ್ಲಿ ಇದ್ದರು. ಗಣೇಶ ಶೆಟ್ಟಿಯವರ ಕೊಲೆಯಾದ ಸುಮಾರು 6 ತಿಂಗಳ ನಂತರ ಅವರ ತಾಯಿ ಸಹ ತೀರಿಕೊಂಡಿರುತ್ತಾರೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ</u>.**

4. ನನಗೆ ದೂರವಾಣಿ ಕರೆ ಮಾಡಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಗಣೇಶ ಶಿವರಾಮ ಶೆಟ್ಟಿಯವರ ಕೊಲೆಯಾದ ವಿಚಾರವನ್ನು ಮುಂಬೈನಿಂದ ತಿಳಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ನಾನು ಶವಪಂಚನಾಮೆಯ ಕಾಲದ ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ. ಮುಂಬೈನಿಂದ ದೂರವಾಣಿ ಕರೆ ಬಂದ ವಿಚಾರವನ್ನು ಮೊದಲಬಾರಿಗೆ ನ್ಯಾಯಾಲಯದಲ್ಲಿ ಮಾತ್ರ ತಿಳಿಸಿರುತ್ತೇನೆ. ನನ್ನ ಹೇಳಿಕೆಗೆ ಹೊರತುಪಡಿಸಿ ಶವ ಪಂಚನಾಮೆಗೆ ನನ್ನ ಸಹಿ ಪಡೆದಿಲ್ಲ. ನಾನು ಪೊಲೀಸರ ಮುಂದೆ ಮೃತ ಗಣೇಶ ಶಿವರಾಮ ಶೆಟ್ಟಿಯವರು ನನಗೆ ಹೇಗೆ ಸಂಬಂಧಿಕರು ಎಂದು ತಿಳಿಸಿರುತ್ತೇನೆ.

5. ಮೃತರ ಶವದ ಮೇಲೆ ಮು.ಮಾ-26 ಇದ್ದ ಬಗ್ಗೆ ನ್ಯಾಯಾಲಯದಲ್ಲಿ ಮಾತ್ರ ಹೇಳುತ್ತಿದ್ದೇನೆ ಎಂದರೆ ಸರಿ. ನಿಪಿ-8 ಫೋಟೋಗಳನ್ನು ಯಾರು ತೆಗೆದಿದ್ದಾರೆ ಎಂದು ಗೊತ್ತಿಲ್ಲ ಆದರೆ ಸದರಿ ಫೋಟೋಗಳು ಮೃತರ ಗಣೇಶ ಶೆಟ್ಟಿಯ ಶವದ ಫೋಟೋಗಳು ಆಗಿರುತ್ತವೆ. ನನ್ನ ಸಮಕ್ಷಮ ಫೋಟೋ ತೆಗೆದ ವಿಷಯವನ್ನು ನ್ಯಾಯಾಲಯದಲ್ಲಿ ಮಾತ್ರ ಹೇಳಿರುತ್ತೇನೆ. ನಾನು ಶವಾಗಾರಕ್ಕೆ ಹೋಗಿರಲಿಲ್ಲ ಮತ್ತು ಶವಪಂಚನಾಮೆಯಲ್ಲಿ ಬಾಗಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-26 ರಲ್ಲಿರುವ ಲೇಬಲನಲ್ಲಿ ನನ್ನ ಸಹಿ ಪಡೆದುಕೊಂಡಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.